# ನಮ್ರತೆಯ ಹಂಬಲ

**ನೀಲತ್ತಹಳ್ಳಿ ಕಸ್ತೂರಿ**

ನಮ್ರತೆಯ ಪ್ರಾಮುಖ್ಯವನ್ನು ಗಾಂಧೀಜಿಯವರ ಜೀವನದ ಹಿನ್ನಲೆಯಲ್ಲಿ ಪರಿಣಾಮಕಾರಿಯಾಗಿ ವಿವರಿಸಿರುವ ಶ್ರೀ ನೀಲತ್ತಹಳ್ಳಿ ಕಸ್ತೂರಿಯವರು ಕನ್ನಡದ ಪ್ರಮುಖ ಬರಹಗಾರರಲ್ಲಿ ಒಬ್ಬರು.

**ಸ**ರಿಸುಮಾರು ೪೦ಸಾವಿರ ಪುಟಗಳಷ್ಟು ಬರವಣಿಗೆಯನ್ನು ಮಾಡಿದ ಮಹಾತ್ಮ ಗಾಂಧೀಯವರು ಒಂದೇ ಒಂದು ಪದ್ಯ ಬರೆದಿದ್ದರು. ಅವರ ಸ್ವಂತ ಪದ್ಯರಚನೆ ಅದೊಂದೇ. ತಮ್ಮ ವಿದೇಶೀ ಶಿಷ್ಯೆ ಮೀರಾ ಬಹೆನ್ (ಮಿಸ್ ಮೆಡಲಿನ್ ಸ್ಲೇಡ್) ಅವರಿಗಾಗಿ ಕೆಲವು ಹಿಂದಿ ಭಜನಗೀತೆಗಳನ್ನು ಇಂಗ್ಲಿಷಿಗೆ ಅನುವಾದಿಸಿದ್ದು ಉಂಟು. ಅವು Songs from Prison (ಸೆರೆಮನೆಯ ಹಾಡುಗಳು) ಎಂಬ ಸಂಕಲನವಾಗಿ ಪ್ರಕಟವಾಗಿವೆ.

ಗಾಂಧೀಜಿ ಬರೆದ ಒಂದೇ ಒಂದು ಸ್ವಂತ ಪದ್ಯ ನಮ್ರತೆಯನ್ನು ಕುರಿತದ್ದು. "ಹೇ ನಮ್ರತಾಕೇ ಸಮ್ರಾಟ್" ಎಂದು ಆರಂಭವಾಗುವ ಈ ಪದ್ಯದ ಇಂಗ್ಲಿಷ್ ಅನುವಾದವೂ ಬಂದಿತು "ಹರಿಜನ" ಪತ್ರಿಕೆಯಲ್ಲಿ—"Oh Lord of Humility" ಎಂದು.

> ನಮ್ರತೆಯು ಕತ್ತಲೆಯ ತೆರದಿ ಸ್ವರ್ಗದ ಬೆಳಕನ್ನು ವ್ಯಕ್ತಗೊಳಿಸುವುದು.
>
> —ಹೆನ್ರಿ ಡೇವಿಡ್ ಥೋರೋ

ಸಾಕಾರ ಸಗುಣೋಪಾಸನೆಗೆ ಮಹತ್ವವನ್ನು ಕೊಟ್ಟ ಭಗವದ್ರಾಮಾನುಜರು ದೇವರನ್ನು ಸಕಲ ಕಲ್ಯಾಣ ಗುಣ ಪೂರ್ಣ ಎಂದೇ ಭಾವಿಸಿಕೊಳ್ಳುತ್ತಾರೆ. **ಅತಿಶಯ ಅಸಂಖ್ಯೇಯ ಕಲ್ಯಾಣ ಗುಣಗಾಂ** ಎಂದು ಅವರು ಮೊದಲು ಶ್ರೀಲಕ್ಷ್ಮಿಯನ್ನು ಧ್ಯಾನಿಸುತ್ತಾರೆ. ದೇವರನ್ನು "**ದಿವ್ಯ ಅದ್ಭುತ ನಿತ್ಯ ನಿರವದ್ಯ ನಿರತಿಶಯ ಜಾಜ್ವಲ್ಯ ಸೌಂದರ್ಯ, ಸೌಗಂಧ್ಯ, ಸೌಕುಮಾರ್ಯ ಲಾವಣ್ಯ ಯೌವನಾದಿ ಅನಂತ ಗುಣನಿಧಿ ದಿವ್ಯರೂಪ** " ಎನ್ನುತ್ತಾರೆ. ಆಚಾರ್ಯರ ಪಾಲಿಗೆ ನಾರಾಯಣ "**ಸ್ವಾಭಾವಿಕ ಅನವಧಿಕ ಅತಿಶಯ ಜ್ಞಾನ ಬಲ ಐಶ್ವರ್ಯ ವೀರ್ಯ ಶಕ್ತಿ ತೇಜಃ ಸೌಶೀಲ್ಯ ವಾತ್ಸಲ್ಯ ಮಾರ್ದವ ಆರ್ಜವ ಸೌಹಾರ್ದ ಸಾಮ್ಯ ಕಾರುಣ್ಯ ಮಾಧುರ್ಯ ಗಾಂಭೀರ್ಯ ಔದಾರ್ಯ ಚಾತುರ್ಯ ಸ್ಥೈರ್ಯ ಧೈರ್ಯ ಶೌರ್ಯ ಪರಾಕ್ರಮ ಸತ್ಯಕಾಮ ಸತ್ಯಸಂಕಲ್ಪ ಕೃತಿತ್ವ ಕೃತಜ್ಞತಾದಿ ಅಸಂಖ್ಯೇಯ ಕಲ್ಯಾಣ ಗುಣಗಣೌಘ ಮಹಾರ್ಣವ.**" (ಶ್ರೀಶರಣಾಗತಿ ಗದ್ಯ)

ಗಾಂಧಿಯವರ ಪಾಲಿಗೊ ದೇವರು ನಮ್ರತೆಯ ಮೂರ್ತಿ, ನಮ್ರತೆಯ ಸಾಮ್ರಾಟ. ಅಹಂಕಾರ ಇರುವ ಕಡೆ ದೇವರು ಇಲ್ಲ. ನಮ್ರತೆ ವಿನಯ ಧೈರ್ಯ ಇರುವ ಕಡೆಯೆ ಆತ ಇರುವುದು. "ದೀನಬಂಧುವೋಂಕ ಹೀನ ಕುಟಿಯಾಮೇ" ಆತ ಇರುವುದು. ದೇವರು ಎಲ್ಲಿದ್ದಾನೆ ಎಂಬುದಕ್ಕೆ ಗುರುದೇವ ಟಾಗೂರರು, "ಅಲ್ಲಿ ರಸ್ತೆ ಮಾಡಲು ಕಲ್ಲು ಒಡೆಯುತ್ತಿರುವ ಶ್ರಮಿಕನ ಪಕ್ಕದಲ್ಲಿ ಇದ್ದಾನೆ ದೇವರು" ಎನ್ನಲಿಲ್ಲವೇ? ಗಾಂಧೀಜಿ ನಮ್ರತೆಯನ್ನೇ ದೇವರು ಎಂದರು, ಸತ್ಯವೇ ದೇವರು ಎಂದರು. ನಮ್ರತೆ ಸತ್ಯದ ಇನ್ನೊಂದು ಮುಖವೇ. ನಮ್ರತೆ ಇಲ್ಲದವನು ಸತ್ಯವಂತ ಹೇಗೆ ಆದಾನು?

ಗಾಂಧಿಯವರ ಆಶ್ರಮದ ಕಟ್ಟಳೆಗಳಲ್ಲಿ ಒಂದು ಪ್ರತಿದಿನದ ಬೆಳಗು ಬೈಗುಗಳ ಪ್ರಾರ್ಥನೆ. ಸೂರ್ಯ ಪಶ್ಚಿಮದಲ್ಲಿ ಹುಟ್ಟಿದರೂ ಹುಟ್ಟಬಹುದೇನೊ, ಗಾಂಧೀಜಿಯ ಆಶ್ರಮ ಪ್ರಾರ್ಥನೆ ಒಂದು ದಿನವೂ ತಪ್ಪುವಂತಿರಲಿಲ್ಲ, ಒಂದು ದಿನವೂ ತಡವಾಗುವಂತಿರಲಿಲ್ಲ. ಅದು ತಡವಾದುದು ಒಂದೇ ಒಂದು ದಿನ, ಜನವರಿ ೩೦,೧೯೪೮, ಬಾಪೂಜಿಯ ಬಾಳಿನ ಕೊನೆಯ ದಿನ. ಅಂದು ಪ್ರಾರ್ಥನೆಗೆ ಐದು ನಿಮಿಷ ತಡವಾಯಿತು ಎಂದು ಧಾವಿಸಿ ಬಂದರು. ಹಂತಕನ ಗುಂಡೇಟಿಗೆ ಬಲಿಯಾದರು.

ಆಶ್ರಮದ ಪ್ರಾರ್ಥನೆಯಲ್ಲಿ ದಿನವೂ ಹೇಳುತ್ತಿದ್ದ ಕೆಳಗಿನ ಶ್ಲೋಕದಲ್ಲಿ ಹನ್ನೊಂದು ವ್ರತಗಳ ಪ್ರಸ್ತಾಪವಿದೆ:

**ಅಹಿಂಸಾ ಸತ್ಯ ಅಸ್ತೇಯ ಬ್ರಹ್ಮಚರ್ಯ ಅಸಂಗ್ರಹ**
**ಶರೀರಶ್ರಮ ಅಸ್ವಾದ ಸರ್ವತ್ರ ಭಯವರ್ಜನಾ**
**ಸರ್ವಧರ್ಮೀ ಸಮಾನತ್ವ ಸ್ವದೇಶಿ ಸ್ಪರ್ಶಭಾವನಾ**
**ಹೀ ಏಕಾದಶಸೇವಾವೀ ನಮ್ರತ್ವೇ ವ್ರತನಿಶ್ಚಯೇ**

ಮೊದಲ ಐದು ಅಹಿಂಸೆ, ಸತ್ಯ, ಅಸ್ತೇಯ, ಬ್ರಹ್ಮಚರ್ಯ, ಅಸಂಗ್ರಹ—ಇವು ಪ್ರಾಚೀನಕಾಲದಿಂದ ನಮ್ಮಲ್ಲಿ ಇದ್ದವೇ. ಹಿಂದೂ ಧರ್ಮದಲ್ಲಿ ಮಾತ್ರವಲ್ಲ, ಜೈನ ಬೌದ್ಧರಲ್ಲೂ ಇದ್ದವೇ. ಉಳಿದ ಆರು ಶರೀರ ಶ್ರಮ, ಅಸ್ವಾದ, ಸರ್ವತ್ರ ಭಯವರ್ಜನಾ, ಸರ್ವಧರ್ಮೀ ಸಮಾನತ್ವ, ಸ್ವದೇಶಿ, ಸ್ಪರ್ಶ ಭಾವನಾ—ಇವು ಇಂದಿನ ಯುಗಕ್ಕೆ ಅಗತ್ಯವಾದ ವ್ರತಗಳು—ಗಾಂಧೀಜಿಯ ಸೂಚನೆಯಂತೆ ಆಚಾರ್ಯ ವಿನೋಬಾ ಪೋಣಿಸಿದ್ದು. ಈ ಹನ್ನೊಂದು ವ್ರತಗಳು ಗಾಂಧೀ ವಿಚಾರ ಪ್ರಣಾಲಿಗೆ ಚಕ್ಕುಬಂದಿ ಇದ್ದಂತೆ. "ಗಾಂಧೀವಾದ" (ಹಾಗೆನ್ನುವುದು ಬೇಡ ಎನ್ನುತ್ತಿದ್ದರು ಗಾಂಧಿ) ಎಂದು ಏನು ಸಾಮಾನ್ಯವಾಗಿ ಪ್ರಚುರ ದಲ್ಲಿದೆಯೊ ಆ ವಿಚಾರಧಾರೆಗೆ ಈ ಹನ್ನೊಂದು ವ್ರತಗಳೂ ಆಧಾರಸ್ತಂಭಗಳು.

ಈ ಹನ್ನೊಂದು ವ್ರತಗಳನ್ನೂ "ನಮ್ರತೆಯಿಂದ ಕೈಗೊಳ್ಳುವೆ" ಎಂದು ಪ್ರತಿದಿನ ಬೆಳಗು ಬೈಗುಗಳಲ್ಲಿ ಆಶ್ರಮದ ಎಲ್ಲರೂ ಹೇಳುತ್ತಿದ್ದರು.

"ಮಂಗಲ ಪ್ರಭಾತ" ಎಂಬುದು ಗಾಂಧೀಜಿಯವರ ಒಂದು ಸುಂದರ ಕೃತಿ. ಅವರು ಯರವಾಡ ಜೈಲಿನಲ್ಲಿ ಇದ್ದಾಗ (೧೯೩೦ ರಲ್ಲಿ) ಪ್ರತಿ ಮಂಗಳವಾರ ಆಶ್ರಮವಾಸಿಗಳಿಗೆ "ವ್ರತವಿಚಾರ" ಎಂಬ ವಿಷಯವಾಗಿ ಪತ್ರಗಳನ್ನು ಬರೆಯುತ್ತಿದ್ದರು. ಇವು ಈ ವ್ರತಗಳನ್ನು ಕುರಿತ ಪತ್ರಗಳು. ಅವುಗಳ ಸಂಕಲನವೇ "ಮಂಗಲ ಪ್ರಭಾತ". ಈ ಪತ್ರಗಳಲ್ಲಿ ಈ ಹನ್ನೊಂದು ವ್ರತಗಳನ್ನು ವಿವರಿಸಿ ಆದಮೇಲೆ ಇನ್ನೊಂದು ಪತ್ರದಲ್ಲಿ "ನಮ್ರತೆ" ಕುರಿತೇ ಬರೆದರು (೭.೧೦.೧೯೩೦). ಏಕಾದಶ ವ್ರತಗಳ ಗೊಂಚಲಿನಲ್ಲಿ "ನಮ್ರತೆ"ಯನ್ನು ಸೇರಿಸಬಹುದು ಎಂಬ ಒಂದು ಸಲಹೆ ಬಂದಿತ್ತು. ಗಾಂಧೀಜಿ ಹಾಗೆ ಮಾಡಲಿಲ್ಲ. ಅವರು ವಿವರಿಸಿದರು: "ನಮ್ರತೆ ಅಹಿಂಸೆಗೆ ಒಂದು ಅರ್ಥ, ಅದರಲ್ಲಿ ಅಂತರ್ಗತ. ಏಕೆಂದರೆ ಅಭ್ಯಾಸದಿಂದ ಬರುವಂಥದಲ್ಲ ನಮ್ರತೆ. ಅದು ಸ್ವಭಾವದಲ್ಲಿಯೇ ಇರಬೇಕು. ... ಆದರೆ ನಮ್ರತೆ ಇತರ ವ್ರತ ಗಳಿಗಿಂತಲೂ ಹೆಚ್ಚು ಆವಶ್ಯಕ ಗುಣ. ಸತ್ಯ ದಯೆ ಇತ್ಯಾದಿ ಗಳನ್ನು ಅಭ್ಯಾಸದಿಂದ ಪಡೆಯಬಹುದು, ಆದರೆ ನಮ್ರತೆಯ ಅಭ್ಯಾಸ ಎಂದರೆ ದಂಭದ ಅಭ್ಯಾಸಮಾಡಿದ ಹಾಗೆಯೇ ಎನ್ನ ಬಹುದು.... ನಮ್ಮ ನಮ್ರತೆ ಶೂನ್ಯದವರೆಗೂ ತಲುಪಬೇಕು. ನಾನೂ ಒಬ್ಬ ಗಣ್ಯ ಎಂಬ ಭೂತ ಆವೇಶವಾಯಿತೊ ನಮ್ರತೆ ಗಾಳಿಗೆ ಹಾರಿಹೋಯಿತು. ಎಲ್ಲ ವ್ರತಗಳೂ ಮಣ್ಣುಪಾಲು.... ನಿಜವಾದ ನಮ್ರತೆ ಪ್ರಾಣಿಮಾತ್ರದ ಸೇವೆಗಾಗಿ ನಮ್ಮಿಂದ ಸರ್ವ ಸಮರ್ಪಣವನ್ನು ಬಯಸುತ್ತದೆ. ಇದು ಅನುಭವದಿಂದ ಅರಿಯ ಬೇಕಾದ ಸ್ಥಿತಿ.

ಮೊದಲು ಪ್ರಸ್ತಾಪಿಸಿದ ಪದ್ಯದಲ್ಲಿ ಒಂದು ಸಾಲು "ಮುಝೀ ಶೂನ್ಯ ಬನಾದೋ" "ನನ್ನನ್ನು ಸೊನ್ನೆಯನ್ನಾಗಿಸು", ಎಂದು. ಸತ್ಯಾಗ್ರಹಿ ಇಂತಹ ಸ್ಥಿತಿಯನ್ನು ಮುಟ್ಟಿರಬೇಕು ಎಂದರು ಗಾಂಧೀಜಿ. ವಾಸ್ತವವಾಗಿ ಅವರೆ ಈ ನಮ್ರತೆಯ ಶ್ರೇಷ್ಠ ಉದಾಹರಣೆ ಆಗಿದ್ದರು. ಹೇಗೆ ಸರಳತೆಯ ಸಾಕಾರವಾಗಿದ್ದರೊ ಹಾಗೆಯೇ ನಮ್ರತೆಯ ಸ್ವರೂಪರೂ ಆಗಿದ್ದರು.

ಗಾಂಧೀಜಿಯ ಈ ನಮ್ರತೆಯ ಪರಾಕಾಷ್ಠೆಯ ಪರೀಕ್ಷೆ ಆದ ಒಂದು ಪ್ರಸಂಗವನ್ನು ಶ್ರೀ ಎಸ್. ರಾಮಕೃಷ್ಣನ್ (ಮಹಾ ಕಾರ್ಯದರ್ಶಿ, ಭಾರತೀಯ ವಿದ್ಯಾಭವನ) ಅವರು ತಮ್ಮ *Mahatma Gandhi, Eternal Piligrim of Peace and Love* ಎಂಬ ಉದ್ಗ್ರಂಥದಲ್ಲಿ ತಿಳಿಸಿದ್ದಾರೆ.

## ತನ್ನ ಸದ್ಗುಣಗಳ ವಿಷಯದಲ್ಲಿರುವ ಹೆಮ್ಮೆ ಪಾಪಕ್ಕಿಂತಲೂ ಮಹಾಪಾಪ

—ವಿನೋಬಾ ಭಾವೆ

೧೯೪೬, ಭಾರತದ ಭವಿಷ್ಯದ ನಿರ್ಧಾರಕ್ಕಾಗಿ ಸಿಮ್ಲಾದಲ್ಲಿ ಸಂಧಾನ ನಡೆಯುತ್ತಿದ್ದ ಸಮಯ. ಲಾರ್ಡ್ ಪೆಥಿಕ್ ಲಾರೆನ್ಸ್ ನೇತೃತ್ವದ ಕ್ಯಾಬಿನೆಟ್ ಆಯೋಗದೊಂದಿಗೆ ಚರ್ಚೆ ಸಾಗುತ್ತಿತ್ತು. ಒಂದು ಮುಂಜಾನೆ ಪ್ರಾರ್ಥನೆಯಲ್ಲಿ ಗಾಂಧೀಜಿಯ ಕಣ್ಣು ಗಳಿಂದ ಹನಿಗಳು ಉದುರುತ್ತಿದ್ದುದನ್ನು ಜೊತೆಯಲ್ಲಿದ್ದ ಖಾನ್ ಅಬ್ದುಲ್ ಗಫಾರ್‌ಖಾನ್ ಗಮನಿಸಿದರು. ಅವಾಕ್ಕಾದರು. "ಬಾಪು, ಏಕೆ ಈ ದುಗುಡದ ಕಂಬನಿ?" ಎಂದು ಕೇಳಿದರು. ಗಾಂಧೀಜಿಯ ಉತ್ತರ ಖಾನರನ್ನು ಮೂಕವಿಸ್ಮಿತಗೊಳಿಸಿರ ಬೇಕು. "ಬಾದ್‌ಷಾಖಾನ್, ನಿನ್ನೆ ರಾತ್ರಿ ನನಗೊಂದು ವಿಚಿತ್ರ ಕನಸು ಬಿತ್ತು. ನಾನು ಬುದ್ಧನಿಗಿಂತಲೂ ಶ್ರೇಷ್ಠ ಎನಿಸಿದ ಕನಸು. ನನ್ನಲ್ಲಿ ಏನೊ ದೋಷ ಇರಬೇಕು. ದಂಭವನ್ನು ನಾನಿನ್ನೂ ನಿಶ್ಶೇಷವಾಗಿ ತೊಡೆದುಹಾಕಿಲ್ಲ. ನನ್ನ ಅಂತರ್ಯ ದಲ್ಲಿ ಕೊಂಚ ದಂಭ ಇನ್ನೂ ಅಂಟಿಕೊಂಡಿದೆ ಎನಿಸುತ್ತದೆ." ಅದೇನು ಮಹಾದೋಷ ಎಂದು ನಾವು ಹೇಳಿಯೇವು. ಆದರೆ ಗಾಂಧೀಜಿಯ ಸತ್ವ ಬೇರೆ. ತನ್ನ ಅಂತರಾಳದಲ್ಲಿ ಉಳಿದಿರ ಬಹುದಾದ ದಂಭ-ಅಹಂಕಾರ-ಗರ್ವದ ಕಣವನ್ನೂ ತೊಡೆದು ಹಾಕಲೆಂದು ಅವರು ಒಂದು ದಿನ ಉಪವಾಸ ಮಾಡಿದರಂತೆ. ಇದು ಲೋಕಕ್ಕೆ ತಿಳಿಯದು. ರಾಮಕೃಷ್ಣನ್ ಅವರಂಥ ಕೆಲವರಿಗೆ ಗೊತ್ತೇನೊ ಅಷ್ಟೆ.

ತಾವು ಕಲ್ಪಿಸಿಕೊಂಡ ನಮ್ರತಾರೂಪಿ ಭಗವಂತನನ್ನು ಸಾಕ್ಷಾ ತ್ಕಾರ ಮಾಡಿಕೊಳ್ಳಲು ಗಾಂಧೀಜಿ ಕ್ಷಣಕ್ಷಣವೂ ಪ್ರಯತ್ನಿಸು ತ್ತಿದ್ದರು—ಜಗತ್ತಿನ ಅನೇಕ ಸಂತರು ಮಾಡಿದಂತೆಯೇ.

ನಮಂತಿ ಫಲಿತಾ ವೃಕ್ಷಾ ನಮಂತಿ ಚ ಬುಧಾ ಜನಾಃ |
ಶುಷ್ಕಕಾಷ್ಠಾನಿ ಮೂರ್ಖಶ್ಚ ಭಿದ್ಯಂತೇ ನ ನಮಂತಿ ಚ ||

ಹಣ್ಣು ಬಿಟ್ಟ ಮರಗಳು ಬಾಗುತ್ತವೆ. ವಿದ್ವಾಂಸರಾದ ಜನರು ವಿನಯದಿಂದ ಬಾಗುತ್ತಾರೆ. ಒಣಗಿದ ಕಟ್ಟಿಗೆಯಾದರೊ ಮುರಿಯುತ್ತದೆ, ಬಾಗುವುದಿಲ್ಲ. ಹಾಗೆಯೇ ಮೂರ್ಖಜನರು ನಾಶವಾದಾರೇ ಹೊರತು ಬಾಗುವುದಿಲ್ಲ.

( *ಸುಭಾಷಿತ ಸುಧಾನಿಧಿ* )